# ಚೆನ್ನವೀರ ಕಣವಿ ಅವರ ಕವಿತೆಗಳಲ್ಲಿ ಪ್ರತಿಫಲಿತವಾದ ಕವಿಕೇಂದ್ರಿತ ಚಿಂತನೆಗಳು

**ಶಿವಕುಮಾರ ಸಿ.*** & **ಶಿಲ್ಪಶ್ರೀ ಹರವು****

**DOI: https://doi.org/10.5281/zenodo.21794407**

**ABSTRACT**

ಚೆನ್ನವೀರ ಕಣವಿ ಅವರ ಕವನಗಳಲ್ಲಿನ ಕಾವ್ಯಮೀಮಾಂಸೆಯನ್ನು ಕುರಿತ ತಾತ್ವಿಕ ಚಿಂತನೆಗಳನ್ನು ವಿಶ್ಲೇಷಿಸುವ ಮುಖೇನ ಒಂದು ಕಾಲಮಾನದ ಸಾಹಿತ್ಯ ಹಾಗೂ ಅದರ ಹಿಂದಿರುವ ಚಿಂತನೆಯನ್ನು ಅರಿತು ಈ ಕಾಲಮಾನದ ಸಾಹಿತ್ಯಕ್ಕೆ ನಮ್ಮ ಪರಂಪರೆಯ ಪ್ರೇರಣೆ ಹಾಗೂ ಪ್ರಭಾವವನ್ನು ಗುರುತಿಸುವ ಪ್ರಯತ್ನಮಾಡಬಹುದು. ಇದರಿಂದ ನಮ್ಮ ವರ್ತಮಾನದ ಸಮಾಜ ಮತ್ತು ಅದನ್ನು ಪರಿಭಾವಿಸುವ ಸಾಹಿತ್ಯ ಹೇಗೆ ಸಾಗುತ್ತಿದೆ ಎಂಬುದರ ಅರಿವು ನಮಗಾಗುತ್ತದೆ. ಬದಲಾದ ಕಾಲಮಾನದಲ್ಲಿ ಸಾಹಿತ್ಯವು ರಂಜನೆಯ ವಿಷಯವಾಗಿರದೆ ಬದುಕಿನ ತಲ್ಲಣಗಳೊಂದಿಗಿನ ಸ್ಪಂದನವೂ ಆಗಿದೆ.

**KEYWORDS:** ಕನ್ನಡ ಕಾವ್ಯ ಪರಂಪರೆ, ಕಾವ್ಯ ಎಂದರೇನು?, ಕಾವ್ಯಸ್ಫೂರ್ತಿ, ಕಾವ್ಯಮೀಮಾಂಸೆ.

* **ಡಾ. ಶಿವಕುಮಾರ ಸಿ.,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕ್ಯಾತನಹಳ್ಳಿ, ಪಾಂಡವಪುರ, ಮಂಡ್ಯ.

** **ಡಾ. ಶಿಲ್ಪಶ್ರೀ ಹರವು,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ಸಾಗರ, ಶ್ರೀರಂಗಪಟ್ಟಣ, ಮಂಡ್ಯ.

ನಮ್ಮಲ್ಲಿ ಕಾವ್ಯ ಸೃಷ್ಟಿಯಾದ ಕಾಲದಿಂದಲೇ ಅದನ್ನು ಕುರಿತಂತೆ ಚರ್ಚೆ ಆರಂಭಗೊಂಡಿದೆ. ಹಿಂದೆ ಕಾವ್ಯ ಎನ್ನುವುದು ಸಾಹಿತ್ಯ ಎಂಬರ್ಥದಲ್ಲಿಯೇ ಬಳಸಲ್ಪಡುತಿದ್ದುದನ್ನು ಗಮನಿಸಬಹುದು. ಭಾರತೀಯ ಕಾವ್ಯ ಮೀಮಾಂಸೆ ಎಂಬ ಹೆಸರಿನಿಂದ ಪ್ರಚಲಿತಗೊಂಡಿರುವ ಸಂಸ್ಕೃತ ಕಾವ್ಯಮೀಮಾಂಸೆಯಲ್ಲಿ ಕಾವ್ಯ ಜಿಜ್ಞಾಸೆಯನ್ನು ಕುರಿತು ಕ್ರಿ.ಶ. 3ನೇ ಶತಮಾನದ ಭರತನಿಂದ 17ನೇ ಶತಮಾನದ ಜಗನ್ನಾಥ ಪಂಡಿತನ ವರೆಗೆ ಸವಿಸ್ತಾರವಾದ ಚರ್ಚೆ ಬೆಳೆದುನಿಂತಿದೆ.

ಕನ್ನಡದ ಕಾವ್ಯ ಸಂದರ್ಭವನ್ನು ಗಮನಿಸಿದಾಗ ಕನ್ನಡದ ಮೊದಲ ಕೃತಿ ಎನಿಸಿರುವ ಕವಿರಾಜಮಾರ್ಗವು ಕಾವ್ಯ ಲಕ್ಷಣ ಗ್ರಂಥವಾಗಿದ್ದು ಕನ್ನಡ ಕಾವ್ಯ ಪರಂಪರೆ ಆರಂಭಗೊಂಡಿರುವುದೇ ಕಾವ್ಯ ಕುರಿತಾದ ಚರ್ಚೆಯಿಂದ ಎಂಬುದು ಗಮನಾರ್ಹ. ಅನಂತರದಲ್ಲಿ ಪಂಪನಿಂದ ಆರಂಭಗೊಂಡ ಕನ್ನಡ ಕಾವ್ಯ ಇಂದಿನವರೆಗೆ ಉತ್ಕೃಷ್ಟವಾಗಿ ಬೆಳೆದು ನಿಂತಿದೆ. ಅದರ ಹಾದಿಯಲ್ಲಿಯೇ ಬೆಳೆದುಬಂದ ಕನ್ನಡ ಕಾವ್ಯಮೀಮಾಂಸೆ ಕೂಡ ಕವಿರಾಜಮಾರ್ಗಕಾರ (ಕ್ರಿ.ಶ.850) ನಿಂದ ಮೊದಲುಗೊಂಡು ಎರಡನೇ ನಾಗವರ್ಮ (ಕ್ರಿ.ಶ.1042), ಉದಯಾದಿತ್ಯ (ಕ್ರಿ.ಶ.1150), ಕವಿಕಾಮ (ಕ್ರಿ.ಶ.1200), ಮಾಧವ (ಕ್ರಿ.ಶ.1500), ಸಾಳ್ವ (1550), ತಿರುಮಲಾರ್ಯ (ಕ್ರಿ.ಶ.1646–1706) ರವರೆಗೆ ಬೆಳೆದು ಬಂದು ಆಧುನಿಕ ಕಾಲದಲ್ಲಿ ತೀ.ನಂ.ಶ್ರೀ, ಕೆ.ಕೃಷ್ಣಮೂರ್ತಿ, ಎಚ್. ತಿಪ್ಪೇರುದ್ರಸ್ವಾಮಿ, ಕೆ.ವಿ.ಸುಬ್ಬಣ್ಣ, ಜಿ.ಎಸ್.ಶಿವರುದ್ರಪ್ಪ ಮೊದಲಾದ ಚಿಂತಕರಿಂದ ಸಮೃದ್ಧಗೊಂಡಿದೆ.

ಚೆನ್ನವೀರ ಕಣವಿ ಅವರ ಕವನಗಳಲ್ಲಿನ ಕಾವ್ಯಮೀಮಾಂಸೆಯನ್ನು ಕುರಿತ ತಾತ್ವಿಕ ಚಿಂತನೆಗಳನ್ನು ವಿಶ್ಲೇಷಿಸುವ ಮುಖೇನ ಒಂದು ಕಾಲಮಾನದ ಸಾಹಿತ್ಯ ಹಾಗೂ ಅದರ ಹಿಂದಿರುವ ಚಿಂತನೆಯನ್ನು ಅರಿತು ಈ ಕಾಲಮಾನದ ಸಾಹಿತ್ಯಕ್ಕೆ ನಮ್ಮ ಪರಂಪರೆಯ ಪ್ರೇರಣೆ ಹಾಗೂ ಪ್ರಭಾವವನ್ನು ಗುರುತಿಸುವ ಪ್ರಯತ್ನಮಾಡಬಹುದು. ಇದರಿಂದ ನಮ್ಮ ವರ್ತಮಾನದ ಸಮಾಜ ಮತ್ತು ಅದನ್ನು ಪರಿಭಾವಿಸುವ ಸಾಹಿತ್ಯ ಹೇಗೆ ಸಾಗುತ್ತಿದೆ ಎಂಬುದರ ಅರಿವು ನಮಗಾಗುತ್ತದೆ. ಬದಲಾದ ಕಾಲಮಾನದಲ್ಲಿ ಸಾಹಿತ್ಯವು ರಂಜನೆಯ ವಿಷಯವಾಗಿರದೆ ಬದುಕಿನ ತಲ್ಲಣಗಳೊಂದಿಗಿನ ಸ್ಪಂದನವೂ ಆಗಿದೆ.

ಆಧುನಿಕಗೊಂಡ ಮನಸುಗಳ ಸಂವೇದನೆಗಳು ಹಂಚಿಹೋಗುತ್ತಿರುವ ಇವತ್ತಿನ ಸಂದರ್ಭದಲ್ಲಿ ಅರ್ಥಪೂರ್ಣ ಬದುಕನ್ನು ನಿರ್ಮಿಸುವಲ್ಲಿ ಕಲೆ ಮತ್ತು ಸಾಹಿತ್ಯದ ಪಾತ್ರ ಮುಖ್ಯವಾಗಿದೆ. ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ನವೋದಯ ಮತ್ತು ನವ್ಯ ಮಾರ್ಗಗಳ ನಡುವೆ ಸೇತುವೆಯಾಗಿ ನಿಂತು, 'ಸಮನ್ವಯ ಕವಿ' ಎನಿಸಿಕೊಂಡ ಚೆನ್ನವೀರ ಕಣವಿಯವರು ತಮ್ಮ ಕಾವ್ಯರಚನೆಯ ಆರಂಭಿಕ ಘಟ್ಟದಿಂದ ಹಿಡಿದು ಕೊನೆಯವರೆಗೂ ಕಾವ್ಯ ಎಂದರೇನು?, ಕಾವ್ಯ ಸೃಷ್ಟಿಯ ರಹಸ್ಯವೇನು?, ಕವಿಯ ಜವಾಬ್ದಾರಿ ಮತ್ತು ಸಮಾಜ ಹಾಗೂ ಪರಂಪರೆಯೊಂದಿಗೆ ಕವಿಗಿರುವ ಬಾಂಧವ್ಯವೇನು? ಎಂಬ ಮೂಲಭೂತ ಕಾವ್ಯಮೀಮಾಂಸಾತ್ಮಕ

ಆಲೋಚನೆಗಳನ್ನು ತಮ್ಮ ಕವಿತೆಗಳಲ್ಲೇ ಮೇಳೈಸಿದ್ದಾರೆ.

ಕಣವಿಯವರಿಗೆ ಕಾವ್ಯ ಎಂಬುದು ಬರಿಯ ಶಬ್ದಾಲಂಕಾರ ಅಥವಾ ತಾತ್ಕಾಲಿಕ ಉದ್ವೇಗವಲ್ಲ. ಅದು ಅರಿವು, ಕಲ್ಪನೆ, ಜೀವನಾನುಭವ ಮತ್ತು ಶಬ್ದ ಸಂಸ್ಕಾರಗಳ ಸಮ್ಮಿಶ್ರಣ. 1949ರಲ್ಲಿ ಪ್ರಕಟವಾದ ಅವರ ಮೊದಲ ಸಂಕಲನ 'ಕಾವ್ಯಾಕ್ಷಿ'ಯಿಂದ ಹಿಡಿದು ನಂತರದ 'ಶಿಶಿರದಲ್ಲಿ ಬಂದ ಸ್ನೇಹಿತ', 'ಜೀವಧ್ವನಿ' ಮುಂತಾದ ಸಂಕಲನಗಳಲ್ಲಿ ಕವಿಯ ಕಾವ್ಯಕೇಂದ್ರಿತ ತುಮುಲಗಳು ಅತ್ಯಂತ ಸೂಕ್ಷ್ಮವಾಗಿ ಅಭಿವ್ಯಕ್ತಿ ಪಡೆದಿವೆ.

ಕಣವಿಯವರ ಕಾವ್ಯ ಚಿಂತನೆಯಲ್ಲಿ ಕಾವ್ಯಸ್ಫೂರ್ತಿ ಎನ್ನುವುದು ಆಕಸ್ಮಿಕವಾಗಿ ಬರುವುದಲ್ಲ. ಅದು ಅಂತರಂಗದ ಆಳವಾದ ಅನುಭವದಿಂದ ಮೂಡುವಂತಹದ್ದು. 'ಕಾವ್ಯಾಕ್ಷಿ' ಸಂಕಲನದ ಪದ್ಯಗಳಲ್ಲಿ ಅವರು ಕಾವ್ಯ ಚೇತನವನ್ನು ಕಾಣುವ ಬಗೆ ಇಲ್ಲಿದೆ:

**''ಅರಿವಿನಾಳದ ಭಾವ ಕಲ್ಪನೆಯುದಾತ್ತತೆಗೆ**
**ಜೀವದುಸಿರಾಡುವ ಸ್ಫೂರ್ತಿ ಕನ್ನೆ,**
**ನಿನ್ನ ದರ್ಶನಫಲಕೆ, ಸ್ಪರ್ಶದ ಚೇತನಕೆ**
**ದೇಹ ರೋಮಾಂಚಿತವು ಎದೆಯ ರನ್ನೆ''**

**– (ಕಾವ್ಯಾಕ್ಷಿ, ಸಮಗ್ರ ಕಾವ್ಯ, ಪುಟ–12)**

ಇಲ್ಲಿ ಕವಿ ತಮ್ಮೊಳಗೆ ಮೂಡಿದ ಕಾವ್ಯಸ್ಫೂರ್ತಿಯನ್ನು 'ಕನ್ನೆ' (ರನ್ನೆ) ಎಂದು ಸಂಭೋದಿಸುತ್ತಾ, ದರ್ಶನ ಮತ್ತು ಸ್ಪರ್ಶದ ಚೇತನಕ್ಕೆ ಶರಣಾಗುತ್ತಾರೆ. ಹೃದಯದಲ್ಲಿ ಉದ್ಭವಿಸಿದ ಅಮೂರ್ತ ಭಾವವೊಂದು ಶಬ್ದಗಳ ರೂಪ ತಳೆಯುವ ಪ್ರಕ್ರಿಯೆಯೇ ರೋಮಾಂಚನಕಾರಿ. ಅರಿವು ಕಲ್ಪನೆಯೊಂದಿಗೆ ಮಿಳಿತಗೊಂಡು ಜೀವತತ್ತ್ವವಾಗಿ ಪರಿಣಮಿಸುವ ಬಗೆಗೂ, ಅದರಿಂದ ದೊರೆಯುವ ಅನುಭೂತಿಗೂ ಕವಿ ಪುಳಕಿತರಾಗಿದ್ದಾರೆ.

ಅಂತೆಯೇ 'ಸ್ಫೂರ್ತಿ' ಕವಿತೆಯಲ್ಲಿ ಕವಿಯಾಗುವ ಕಠಿಣ ಹಾದಿಯನ್ನು ಹೀಗೆ ಬಣ್ಣಿಸುತ್ತಾರೆ:

**''ಸುಖ ದುಃಖ ಆಕಾಂಕ್ಷೆಗಳ ಜೇನೊಡೆದ**
**ಬಾಳ ಹೊಂಗನಿಸಿನಲಿ ರೂಹುವಡೆದು**
**ಮೋಡಗಳ ಕರುಮಾಡದಲಿ ದಿವ್ಯಾತ್ಮದಲಿ**
**ಕರೆಯುವನು ಕವಿ ಜನ್ಮದ ಮೇಲ್ಮೆವಡೆದು''**

**– (ಕಾವ್ಯಾಕ್ಷಿ, ಸಮಗ್ರ ಕಾವ್ಯ, ಪುಟ–16)**

ಕವಿ ಜನ್ಮ ತಾಳುವುದು ಸುಲಭದ ಮಾತಲ್ಲ ಎಂಬುದು ಕಣವಿಯವರ ಸ್ಪಷ್ಟ ನಿಲುವು. ಎಲ್ಲರೂ ಕಾವ್ಯ ರಚಿಸಲಾರರು; ಶಬ್ದಗಳನ್ನು ಜೋಡಿಸುವ ಕೌಶಲಕ್ಕಿಂತ ಹೆಚ್ಚಾಗಿ ಕಾವ್ಯ ಸೃಷ್ಟಿಸುವ ಜನ್ಮಜಾತ ಪ್ರತಿಭೆಯ ಜೊತೆಗೆ ಬದುಕಿನ ಸುಖ–ದುಃಖಗಳ

ನೈಜ ಅನುಭವ ಮಿಳಿತಗೊಳ್ಳಬೇಕು. ಮುಂದೆ 'ಕವಿತೆಗೆ' ಎಂಬ ಕವನದಲ್ಲಿ, ಕಾವ್ಯವು ಕವಿಯ ಸ್ಥಬ್ದ ಮನಸ್ಸಿಗೆ ಹೇಗೆ ಹೊಸ ಚೈತನ್ಯ ತರುತ್ತದೆ ಎಂಬುದನ್ನು ವಿವರಿಸುತ್ತಾರೆ:

**"ಕವಿ ಮನವು ಬರಿಯುದಾಸೀನ ರಸಹೀನತೆಯ**
**ದೀನತೆಯ ತವರು ; ಅದೂ ವಿಶ್ವಮೋಹಿನಿ ಉಷೆಯ**
**ಚುಂಬನುತ್ಕರ್ಷಣೆಗೆ ಭೂಮಿಗಿಳಿದ ನಾಕ !"**
**– (ಶಿಶಿರದಲ್ಲಿ ಬಂದ ಸ್ನೇಹಿತ, ಸಮಗ್ರ ಕಾವ್ಯ, ಪುಟ–473)**

ನಿತ್ಯ ಜೀವನದ ನಿರಾಸಕ್ತಿ, ಉದಾಸೀನತೆ ಹಾಗೂ ರಸಹೀನತೆಯಿಂದ ಕೂಡಿದ ಮಾನವ ಮನಸ್ಸಿಗೆ ಕಾವ್ಯಸ್ಫೂರ್ತಿಯು ವಿಶ್ವಮೋಹಿನಿಯಾದ ಉಷೆಯ ಆಕರ್ಷಣೆಗಾಗಿ ಧರೆಗಿಳಿದ ಸ್ವರ್ಗದಂತೆ ಹೊಸ ಚೈತನ್ಯ ತರುತ್ತದೆ ಎನ್ನುತ್ತಾರೆ. ಈ ಸಂದರ್ಭದಲ್ಲಿ, "ಕವಿ ಎಂಬ ಪದಕ್ಕೆ ಪದ್ಯ ಹೆಣೆಯುವವನು ಎಂಬರ್ಥದಿಂದ ಹಿಡಿದು 'ದ್ರಷ್ಟಾರನಾದ ರಸಋಷಿ' ಎಂಬರ್ಥದವರೆಗೂ ವ್ಯಾಪ್ತಿಯಿದೆ" ಎಂಬ ಕುವೆಂಪು ಅವರ ಮಾತು ಇಲ್ಲಿ ಸ್ಮರಣೀಯ.

## ಕಾವ್ಯದ ಶಾಶ್ವತತೆ, ಕಾಲದ ಒರೆಗಲ್ಲು ಮತ್ತು ಕವಿಯ ವಿನಯ

ಕಾವ್ಯ ಸೃಷ್ಟಿಯಾದ ನಂತರ ಅದು ಕಾಲವನ್ನು ಗೆದ್ದು ನಿಲ್ಲಬೇಕಾದರೆ ಏನಿರಬೇಕು? ಈ ಪ್ರಶ್ನೆಗೆ 'ಕಾಲ ಪುರುಷನಲ್ಲಿ ಕವಿಯ ಕೋರಿಕೆ' ಎಂಬ ಕವಿತೆಯಲ್ಲಿ ಕಣವಿಯವರು ಕಂಡುಕೊಂಡ ಉತ್ತರ ಅಪೂರ್ವವಾದದ್ದು. ಕಾಲಪುರುಷನಿಗೆ ಸಲ್ಲಿಸುವ ಪ್ರಾರ್ಥನೆಯಲ್ಲಿ ಅವರ ವಿನಯ ಹಾಗೂ ಆತ್ಮವಿಮರ್ಶೆ ಎದ್ದು ಕಾಣುತ್ತದೆ:

**"ನಮ್ಮ ಕೃತಿಗಳು ನಿನ್ನ ಒರೆಗಲ್ಲಿನಲಿ ನಿಂತು ಬದುಕಬೇಕಂತೆ ;**
**ಎಲ್ಲ ವಿಮರ್ಶಕರ ತಲೆ ಮೇಲೆ ಹತ್ತಿ"**

ಸಾಹಿತ್ಯ ವಿಮರ್ಶಕರ ಕ್ಷಣಿಕ ಹೊಗಳಿಕೆಗಳಿಗಿಂತ, 'ಕಾಲದ ಒರೆಗಲ್ಲು' ಪ್ರಮುಖವಾದುದು. ಕಾವ್ಯವು ಶಾಶ್ವತತೆ ಗಳಿಸಬೇಕಾದರೆ ಅದು ಸಾರ್ವಕಾಲಿಕ ಮಾನವೀಯ ಮೌಲ್ಯಗಳನ್ನು ಒಳಗೊಂಡಿರಬೇಕು. ಕಾವ್ಯಸೃಷ್ಟಿಯ ನಂತರ ಕವಿ ಕೃತಿಯನ್ನು ಕಾಲಕ್ಕೆ ಅರ್ಪಿಸುವಾಗ ತಳೆಯುವ ವಿನಯದ ಸಾಲುಗಳು ಹೀಗಿವೆ:

**"ಇಗೋ**
**ನಮ್ಮ ಮನದಂಗಳದಲಿ ಬೆಳೆದಷ್ಟು ಕವಿತೆಗಳ**
**ನಿನ್ನ ಮಡಿಲೊಳಗಿಡಲು ತಂದಿರುವೆವು**
**ತುಂಬಿ ಹರಿಯುವ ಹೊಳೆಯ ನೀರಿನಲಿ**
**ಇವುಗಳನ್ನು ಹಾಯಾಗಿ ತೇಲಿಸಪ್ಪ**
**ಸ್ವಾಮಿ ನಮ್ಮಪ್ಪ"**

ಇಲ್ಲಿ ವ್ಯಕ್ತವಾಗುವುದು ಕವಿಯ ನಿರಹಂಕಾರ. ತಾನು ಬರೆದದ್ದು ಶ್ರೇಷ್ಠವೆಂಬ ಅಹಂಭಾವವಿಲ್ಲದೆ, ತುಂಬಿ ಹರಿಯುವ ಕಾಲವೆಂಬ ಹೊಳೆಯಲ್ಲಿ ತನ್ನ ಕವಿತೆಗಳನ್ನು ತೇಲಿಸಿಬಿಡುವ ವಿನಯ ಇಲ್ಲಿದೆ. ಇಂತಹ ವಿನಯ ನಮಗೆ ದಾಸ ಸಾಹಿತ್ಯ ಮತ್ತು

ಜನಪದ ಕಾವ್ಯ ಪರಂಪರೆಯಿಂದ ಬಂದದ್ದು. ಉದಾಹರಣೆಗೆ, ‘ಮಲೆಯ ಮಾದೇಶ್ವರ’ ಜನಪದ ಮಹಾಕಾವ್ಯದ ಈ ಸಾಲುಗಳನ್ನು ನೆನಪಿಸಿಕೊಳ್ಳಬಹುದು:

**“ಒಂದನು ಅರಿಯದ ಕಂದನು ಪೇಳುವೆ**
**ಚಂದದಿ ಕೇಳಿರಿ ಶಿವನುಡಿಯ**
**ಕುಂದು ಕೋವಿದ್ದರೆ ಮನ್ನಿಸಿ ಮಾನ್ಯರೆ**
**ಸಣ್ಣ ಬಾಲರ ವಾಕ್ಯಗಳ”**

ಜನಪದ ಕವಿಯ ಈ ವಿನಯದ ಮುಂದುವರಿದ ಭಾಗವಾಗಿಯೇ ಕಣವಿಯವರ ಕಾವ್ಯೋಕ್ತಿಗಳನ್ನು ನಾವು ಕಾಣಬಹುದು.

ಚೆನ್ನವೀರ ಕಣವಿ ಕೇವಲ ಭಾವಕೋಶದ ಕವಿಯಲ್ಲ; ಅವರೊಳಗೆ ಒಬ್ಬ ಜಾಗರೂಕ ವಿಮರ್ಶಕನಿದ್ದ. ‘ಕವಿಯೊಳಗೊಬ್ಬ ವಿಮರ್ಶಕ, ವಿಮರ್ಶಕನೊಳಗೊಬ್ಬ ಕವಿ ಇರುತ್ತಾನೆ’ ಎಂಬ ಮಾತಿಗೆ ಕಣವಿಯವರ ‘ಕವಿಗಳಿಗೆ ಕರೆ’ ಕವಿತೆ ಸಾಕ್ಷಿಯಾಗಿದೆ. ಇದು ಬರಿಯ ಕಾವ್ಯ ರಚನೆಯ ವೈಭವೀಕರಣವಲ್ಲ, ಬದಲಿಗೆ ಅಗ್ಗದ ಕಾವ್ಯ ಪ್ರದರ್ಶನ ಹಾಗೂ ಕವಿಗೋಷ್ಠಿಗಳ ಡಾಂಭಿಕತೆಯನ್ನು ಚುಚ್ಚುವ ವ್ಯಂಗ್ಯಚಿತ್ರ. ಕವಿಗೋಷ್ಠಿಯೊಂದರಲ್ಲಿ ಕವಿತೆಗಳು ಹಿತವೆನಿಸದೆ, ಬರಿಯ ಶಬ್ದಜಾಲವಾದಾಗ ಸಭಿಕನೊಬ್ಬನ ಪ್ರತಿಕ್ರಿಯೆಯನ್ನು ಕಣವಿ ಹೀಗೆ ಹಿಡಿದಿಡುತ್ತಾರೆ:

**“ಇವರು ಮಾಡಿದ್ದು ಮಾತ್ರ ಸಿರಿಗನ್ನಡ ಕೋಶ ಕೋಲು”**
**ಎಂದು ಚುಚ್ಚುತ್ತಾ,**
**“ಕವಿತೆಯ ಹೆಸರಲ್ಲಿ ಉಸಿರು ಕಟ್ಟಿಸುವ ತಂತಮ್ಮ ತೀಟೆ, ತೆವಲು”**

ಎಂದು ಆಕ್ರೋಶ ವ್ಯಕ್ತಪಡಿಸುತ್ತಾರೆ. ಯಾವುದೇ ಅಂತರಂಗದ ಮಿಡಿತವಿಲ್ಲದೆ, ಬರಿಯ ಪ್ರಾಸ ಮತ್ತು ಕೋಶದ ಶಬ್ದಗಳನ್ನು ನೆಚ್ಚಿಕೊಂಡು ಕವಿತೆ ಬರೆಯುವವರನ್ನು ಅವರು ಕಟುವಾಗಿ ವಿಮರ್ಶಿಸುತ್ತಾರೆ. ಕಾವ್ಯ ಸೃಷ್ಟಿಗೆ ಬೇಕಾದ ಮಾನಸಿಕ ಪಾಕದ ಬಗ್ಗೆ ಅವರ ಸಲಹೆ ಹೀಗಿದೆ:

**“ಅಂತರಂಗದ ಕರೆಯು ಬರುವವರೆಗೂ ಕಾದು**
**ಆ ಮೇಲೆ ಬರೆದರೆ ಅವರಿಗೂ ಮರ್ಯಾದೆ”**

ತರಾತುರಿಯಲ್ಲಿ ಅಡುಗೆ ಮಾಡಿದಂತೆ ಕವಿತೆ ಬರೆಯಲಾಗುವುದಿಲ್ಲ. ಕವಿತೆಯು ಅಂತರಂಗದ ಆಳದಲ್ಲಿ ರೂಪುಗೊಂಡು, ಕುದಿದು, ಪಕ್ವವಾಗಿ ಹೊರಹೊಮ್ಮಬೇಕು. ಕವಿಗೆ ಶಬ್ದಸಂಪತ್ತು ಮಾತ್ರವಿದ್ದರೆ ಸಾಲದು, ಜೀವನಾನುಭವದೊಂದಿಗೆ ಮಿಳಿತಗೊಂಡ ಭಾವನೆ ಎದೆಯಲ್ಲಿ ಮೂಡಿಬರಬೇಕು. ಇಲ್ಲವಾದರೆ ಅಂತಹ ಕವಿತೆ ಕಾಲದ ಓಟದಲ್ಲಿ ಕೊಚ್ಚಿಹೋಗುತ್ತದೆ.

### ಸಾಹಿತ್ಯ ಪರಂಪರೆಯ ಅರಿವು ಮತ್ತು ಪ್ರಭಾವ

ಕವಿಯಾದವನು ಪರಂಪರೆಯನ್ನು ತಿರಸ್ಕರಿಸಿ ಸ್ವತಂತ್ರವಾಗಿ ನಿಲ್ಲಲಾರ. ಕಣವಿಯವರು ತಮ್ಮ ಸಾಹಿತ್ಯಿಕ ಗುರುಗಳನ್ನು ಮತ್ತು ತಮಗೆ ದಾರಿದೀಪವಾದ

ಪರಂಪರೆಯನ್ನು ಕೃತಜ್ಞತೆಯಿಂದ ನೆನೆಯುತ್ತಾರೆ. 'ಅಚ್ಚ ಪ್ರತಿಭೆಯ ಹುಚ್ಚು ಕವಿತೆ'ಯಲ್ಲಿ ತಮ್ಮ ಮೇಲೆ ಪ್ರಭಾವ ಬೀರಿದ ಸಾಹಿತ್ಯ ದಿಗ್ಗಜರನ್ನು ಸ್ಮರಿಸುವ ಬಗೆ ಹೀಗಿದೆ:

**"ಸೋಪಜ್ಞತೆಯ ರಂಗುದುಡಿ ನಡುವೆ ಮುಗ್ಧತೆಯ**
**ಮಗುಳುನಗೆ, ಕೊಂಕಿರದ ನೋಟ, ಕಾವ್ಯಕ್ಕೆ ಕಂ**
**ಬನಿಗರೆದ ಅಜ್ಜಿ ಅಂಬಕ್ಕನೆ ಮೈತುಂಬ**
**ಅಂಬಿಕಾತನಯ 'ಕನಸಿಗ'ನ ಚಿತ್ತ**
**ತಲೆ ಮೇಲೆ ಗಳಗನಾಥರ ಕೈ"**

ಇಲ್ಲಿ ಬೇಂದ್ರೆಯವರ ('ಅಂಬಿಕಾತನಯದತ್ತ') ಭಾವಶಕ್ತಿ, ಗಳಗನಾಥರ ಕಥನ ಕೌಶಲ ಮತ್ತು ಕನ್ನಡದ ಮುಗ್ಧ ಜಾನಪದ ಪರಂಪರೆಯನ್ನು ಗೌರವದಿಂದ ನೆನೆಯುತ್ತಾರೆ.

ಸಂದರ್ಶನವೊಂದರಲ್ಲಿ ಅವರು ಹೇಳಿದ ಮಾತುಗಳು ಅವರ ಕಾವ್ಯ ಪ್ರಜ್ಞೆಯನ್ನು ಬಿಂಬಿಸುತ್ತವೆ:

"ಇವತ್ತಿನ ಕಾವ್ಯ ಮತ್ತು ಸಾಹಿತ್ಯ ಓದಿದರೆ ಸಾಲದು, ಪಂಪ–ಕುಮಾರವ್ಯಾಸನಿಂದ ಹಿಡಿದು ಕಾವ್ಯ ಪರಂಪರೆಯನ್ನು ಓದಬೇಕು. ಅದರ ಮೂಲಕ ಕಾವ್ಯ ಸಂಸ್ಕೃತಿ ಬೆಳೆಸಿಕೊಳ್ಳಬೇಕು. ಬಾಹ್ಯ ಒತ್ತಡಗಳಿಗೆ ಮಣಿಯಬಾರದು, ತನಗೆ ಮತ್ತು ತನ್ನಿಷ್ಟಕ್ಕೆ ಪ್ರಾಮಾಣಿಕವಾಗಿರಬೇಕು."

ತನ್ನತನದ ಪ್ರಾಮಾಣಿಕತೆ ಮತ್ತು ಪರಂಪರೆಯ ಅಧ್ಯಯನವೇ ಕವಿಯ ನಿಜವಾದ ಶಕ್ತಿ ಎಂಬುದು ಕಣವಿಯವರ ದೃಢ ನಂಬಿಕೆಯಾಗಿತ್ತು.

**ಪ್ರಕೃತಿಯ ವಿಸ್ಮಯ ಮತ್ತು ಕವಿಯ 'ಧನ್ಯತಾ ಭಾವ'**

ಕವಿಯಾದವನು ಸಮಾಜದ ಚಲನೆಗೆ ಮಾತ್ರವಲ್ಲ, ಪ್ರಕೃತಿಯ ಸೂಕ್ಷ್ಮ ಬದಲಾವಣೆಗಳಿಗೂ ತೀವ್ರವಾಗಿ ಸ್ಪಂದಿಸುತ್ತಾನೆ. 'ಕವಿಯ ಧನ್ಯತೆ' ಎಂಬ ಕವಿತೆಯಲ್ಲಿ ಆಧುನಿಕೀಕರಣದಿಂದ ನಗರೀಕರಣದತ್ತ ಜಾರುತ್ತಿರುವ ಜಗತ್ತಿನಲ್ಲಿ ಜೀವಸಂಕುಲ ನಶಿಸುತ್ತಿರುವುದನ್ನು ಕಂಡು ಕವಿ ಮಿಡಿಯುತ್ತಾರೆ. ತಮ್ಮ ಗ್ರಾಮೀಣ ಪರಿಸರದಲ್ಲಿದ್ದ, ಮನೆಯ ಸಂಗಾತಿಯಂತಿದ್ದ 'ಗುಬ್ಬಚ್ಚಿ' ದಿಢೀರನೆ ಕಣ್ಮರೆಯಾದುದಕ್ಕೆ ಚಕಿತರಾಗುವ ಕವಿ, ಯಾಂತ್ರಿಕತೆಯ ಕಾಂಕ್ರೀಟ್ ಕಾಡಾದ ಮುಂಬೈನಂತಹ ಮಹಾನಗರದಲ್ಲಿ ಅದೇ ಗುಬ್ಬಚ್ಚಿಯ 'ಚಿವ್ ಚಿವ್' ದ್ವನಿ ಕೇಳಿದಾಗ ಉದ್ಘಾರಿತನಾಗುತ್ತಾನೆ.

**"ಇಂಥ ಬಿಡುವಿರದ ನಗರದಲಿ ಈ ಗಿರಾಕಿ**
**ಅಲ್ಲಿ ಊರಿನಲಿ ಕಣ್ಮರೆಯಾದ ಪುಟ್ಟ ಜೀವಿ**
**ಇಲ್ಲಿ ಬದುಕಿವೆಯಲ್ಲ, ಧನ್ಯನಾದನು ಕವಿ."**

ಒಂದು ಸಣ್ಣ ಜೀವಿಯ ಉಳಿವು ಕವಿಗೆ 'ಧನ್ಯತಾ ಭಾವ'ವನ್ನು ತರುತ್ತದೆ. ಪ್ರಕೃತಿಯ ಸೌಂದರ್ಯ ಮತ್ತು ಜೀವಚೈತನ್ಯಕ್ಕೆ ಮರುಳಾಗದ ಕವಿಯಿರಲು ಸಾಧ್ಯವಿಲ್ಲ

ಎಂಬುದಕ್ಕೆ ಈ ಕವಿತೆ ಜ್ವಲಂತ ಸಾಕ್ಷಿ. ಕಣವಿಯವರ ಕಾವ್ಯಚಿಂತನೆಯ ಮತ್ತೊಂದು ಶ್ರೇಷ್ಠ ಕವನ 'ಬರೆದು ತೀರದ ಬದುಕು'. ಇಲ್ಲಿ ಮನಸ್ಸನ್ನು ಅಡುಗೆಮನೆಗೂ, ಬದುಕಿನ ಅನುಭವಗಳನ್ನು ಕಾವ್ಯ ಪಾಕಕ್ಕೂ ಹೋಲಿಸಿ ರೂಪಕ ನಿರ್ಮಿಸುತ್ತಾರೆ:

**"ಬದುಕು ಕೊಡುವುದಕ್ಕೆ ಕೊನೆಯಿಲ್ಲ ; ಕೊಟ್ಟಷ್ಟು ಪಡೆ**
**ದು ಅಟ್ಟುಣುವ ಬಗೆ ಬೇರೆ. ಇಷ್ಟಾನಿಷ್ಟಗಳ**
**ಕಷ್ಟ ಸುಖದಲಿ ಕುದಿಸಿ, ಸ್ಥಾಯಿ-ಸಂಚಾರಿಗಳ**
**ತಾಯಾಗಿ, ಅನುಭವಕೆ ಬಾಗಿ, ನಿಂತ ಕಡೆ**
**ನೆರಳು ಹರಡುವ ಗಿಡದ ಚಿಗುರು-ಹೂ-ಕಾಯಾಗಿ**
**ಸಂಪ್ರದಾಯವ ಮೀರಿ ಮಾಗಿದ ಹೆಮ್ಮಿಗೆ ನಗೆ."**

ಬದುಕು ಕೊಡುವ ಅನುಭವ ಅಪರಿಮಿತ. ಅದನ್ನು ಸ್ವೀಕರಿಸಿ, ಕಷ್ಟ-ಸುಖಗಳ ರಸಪಾಕದಲ್ಲಿ ಕುದಿಸಿ, ಸಂಪ್ರದಾಯದ ಗಡಿಗಳನ್ನು ಮೀರಿ, ಹೂ-ಕಾಯಾಗಿಸುವ ಕೌಶಲವೇ ಕಾವ್ಯ. ಅನುಭವಕ್ಕೆ ಬಾಗುವುದು ಎಂದರೆ ಕವಿಯ ವಿನಮ್ರತೆ. ಕವಿ ಮುಂದುವರಿದು ಕಾವ್ಯ ಹುಟ್ಟುವ ಘಳಿಗೆಯನ್ನು ವರ್ಣಿಸುತ್ತಾರೆ:

**"ನಡುಗುವ ಬೆರಳ ನಡುವಿನಲಿ ತುಡಿವ ಲೇಖನಿಗೆ**
**ಮಿಡಿವ ಹೃದಯದ ಸೂಕ್ಷ್ಮ ಸಹಜಾತ್ಮ ಕಥೆ. ತಿರುಗಿ**
**ಮಕ್ಕಳಿಗೆ ಬೀಸಿ 'ಮಾಯದ ಕೋಲು' ನಕ್ಕು ನಲಿ**
**ದಂಡಿಸಿತು ಬಣ್ಣದ ಚಿಟ್ಟೆ ಹೂವಿಂದ ಹಾರಿ."**

ಲೇಖನಿ ಎನ್ನುವುದು ಬರಿಯ ಕಡ್ಡಿಯಲ್ಲ, ಅದು ಮಿಡಿಯುವ ಹೃದಯದ ಸೂಕ್ಷ್ಮ ಕಥೆಯನ್ನು ಬರೆಯುವ ಮಾಯದ ಕೋಲು. ಅದು ಒಮ್ಮೆ ಮಗುವಿನ ಆಟದ ವಸ್ತುವಾದರೆ, ಮತ್ತೊಮ್ಮೆ ಬಣ್ಣದ ಚಿಟ್ಟೆಯಂತೆ ಸೌಂದರ್ಯವನ್ನು ಹೂವಿನಿಂದ ಹೂವಿಗೆ ಹರಿಸುತ್ತದೆ. ಕವಿತೆ ಬರೆದು ಮುಗಿಸಿದಾಗ ಕವಿಗಾಗುವ ಅನುಭೂತಿಯನ್ನು ಅವರು ಹೀಗೆ ಬಣ್ಣಿಸುತ್ತಾರೆ:

**"ಅರಳು ಮರಳಿಗು ಹೊಮ್ಮಿದ ಸ್ವಗತಲಹರಿ**
**ಮತ್ತೆನು ಹುದುಗಿತ್ತೊ ನೆನಪಿನ ಹಗೇವಿನಲಿ**
**ಎಷ್ಟೋ ರಾತ್ರಿಗಳ ದಾಟಿ ಬೆಳಗು ನಿರೀಕ್ಷಿಸಲು**
**ಬರೆದು ಮುಗಿಸಿದ ಹಾಗೆ ಸ್ವಚ್ಛವಾಯಿತು ಮುಗಿಲು."**

ಬರೆಯುವ ತವಕವು ಹೆರಿಗೆಯ ವೇದನೆಯಂತೆ. ರಾತ್ರಿಗಳ ಬೆಳಗಿನ ನಿರೀಕ್ಷೆಯಂತೆ ಕವಿತೆ ಬರೆದು ಮುಗಿಸಿದಾಗ, ಕವಿಯ ಮನಸ್ಸಿನ ಆಕಾಶ ಕ ಮೋಡಗಳಿಲ್ಲದೆ ಸ್ವಚ್ಛವಾಗುತ್ತದೆ (ನಿರುಮ್ಮಳವಾಗುತ್ತದೆ). ಆದರೆ ಈ ಶಾಂತಿ ಶಾಶ್ವತವಲ್ಲ, ಇದು ಮತ್ತೊಂದು ಕಾವ್ಯ ಗರ್ಭಕಟ್ಟುವಿಕೆಗೆ ಮುನ್ನುಡಿ.

**ನವೋದಯ ಮತ್ತು ನವ್ಯಗಳ ನಡುವಿನ ಕಾವ್ಯ ಸಂವಾದ**

ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕಾವ್ಯ ಎಂದರೇನು? ಎಂಬುದರ ಬಗ್ಗೆ

ಕಾಲಕಾಲಕ್ಕೆ ಚಿಂತನೆಗಳು ಬದಲಾಗಿವೆ. ನವೋದಯ ಕವಿಗಳು ಕಾವ್ಯವನ್ನು 'ಆತ್ಮಶ್ರೀಗಾಗಿ, ರಸಋಷಿಯ ದರ್ಶನಕ್ಕಾಗಿ' ಎಂದರೆ; ನವ್ಯ ಕವಿಗಳು ಕಾವ್ಯವನ್ನು 'ವ್ಯಕ್ತಿವಿಶಿಷ್ಟ ಸಂಕೀರ್ಣ ಅನುಭವಗಳ ಭಾಷಿಕ ಹುಡುಕಾಟ' ಎಂದರು.

ಈ ಸಂದರ್ಭದಲ್ಲಿ ಚೆನ್ನವೀರ ಕಣವಿ ಅನುಸರಿಸಿದ ಹಾದಿ 'ಸಮನ್ವಯ ಮಾರ್ಗ'. ಕಣವಿಯವರು ನವೋದಯದ ಭಾಷಿಕ ಸೌಂದರ್ಯ ಮತ್ತು ಮಾನವೀಯ ಪ್ರೀತಿಯನ್ನು ಬಿಟ್ಟುಕೊಡಲಿಲ್ಲ. ಅದೇ ಸಮಯದಲ್ಲಿ ನವ್ಯದ ವಾಸ್ತವಪ್ರಜ್ಞೆ, ವಿಮರ್ಶಾತ್ಮಕ ನೋಟ ಮತ್ತು ಸಂಕೀರ್ಣತೆಯನ್ನು ತಮ್ಮ ಕಾವ್ಯತತ್ತ್ವದಲ್ಲಿ ಅಳವಡಿಸಿಕೊಂಡರು.

ಅಮೂರ್ತವೂ, ಅಸ್ತವ್ಯಸ್ತವೂ ಆದ ಅನುಭವ ದ್ರವ್ಯವನ್ನು ತನ್ನದೇ ಆದ ಶೈಲಿಯಲ್ಲಿ ಭಾಷೆಯ ಮಾಧ್ಯಮದ ಮೂಲಕ ಒಂದು ನಿರ್ದಿಷ್ಟ ಆಕಾರಕ್ಕೆ ತರುವುದೇ ಕವಿಯ ಶೈಲಿಯ ಸಮಸ್ಯೆ. ಕಣವಿಯವರ ಕಾವ್ಯಕೇಂದ್ರಿತ ಕವಿತೆಗಳು ಈ ಭಾಷಿಕ ಮತ್ತು ಅನುಭವಜನ್ಯ ಸವಾಲುಗಳನ್ನು ಕವಿ ಹೇಗೆ ಮೆಟ್ಟಿ ನಿಲ್ಲುತ್ತಾನೆ ಎಂಬುದನ್ನು ಸ್ಪಷ್ಟವಾಗಿ ನಿರೂಪಿಸುತ್ತವೆ. ಮೂಲಭೂತವಾಗಿ, ಚೆನ್ನವೀರ ಕಣವಿ ಅವರ ಕಾವ್ಯಕೇಂದ್ರಿತ ಚಿಂತನೆಗಳು ಬರಿಯ ಸಿದ್ಧಾಂತಗಳಲ್ಲ. ಅವು ಒಬ್ಬ ನಿಜವಾದ ಕವಿ ತನ್ನ ಸೃಜನಶೀಲ ಪ್ರಯಾಣದಲ್ಲಿ ಅನುಭವಿಸಿದ ಹರ್ಷ, ತುಮುಲ, ನಿರಾಶೆ, ಪ್ರಕೃತಿ ಬೆರಗು ಮತ್ತು ಧನ್ಯತೆಗಳ ಸಾಕ್ಷಿಪ್ರಜ್ಞೆ.

ಅವರು ತಮ್ಮ ಕವಿತೆಗಳ ಮೂಲಕ ನಿರೂಪಿಸಿದ ಕಾವ್ಯತತ್ತ್ವವು ಇಂದಿನ ಯುವ ಕವಿಗಳಿಗೂ ದಾರಿದೀಪವಾಗಿದೆ. ಕಾವ್ಯ ಎಂಬುದು ಅಗ್ಗದ ಪ್ರಚಾರದ ವಸ್ತುವಾಗದೆ, ಅಂತರಂಗದ ಪ್ರಾಮಾಣಿಕತೆಯಿಂದ ಹೊರಹೊಮ್ಮುವ, ಪರಂಪರೆಯ ಅರಿವಿನಿಂದ ಮಾಗುವ ಮತ್ತು ಸಮಾಜ–ಪ್ರಕೃತಿಗಳನ್ನು ಪ್ರೀತಿಯಿಂದ ತಟಸ್ಥವಾಗಿ ನೋಡುವ ಕಣ್ಣಾಗಬೇಕು ಎಂಬುದೇ ಚೆನ್ನವೀರ ಕಣವಿ ಅವರ ಕವಿತೆಗಳು ನಮಗೆ ನೀಡುವ ಸಂದೇಶ. ಈ ಮೂಲಕ ಅವರು ಕಾಲಪುರುಷನ ಒರೆಗಲ್ಲಿನಲ್ಲಿ ನಿಂತು ಗೆದ್ದ ಶ್ರೇಷ್ಠ ಕವಿಯಾಗಿ ಕನ್ನಡಿಗರ ಮನಸ್ಸಿನಲ್ಲಿ ನೆಲೆಸಿದ್ದಾರೆ.

**ಪರಾಮರ್ಶನಾ ಗ್ರಂಥಗಳು:**

1. ಚೆನ್ನವೀರ ಕಣವಿ, (2018), ಕಣವಿ ಸಮಗ್ರ ಕಾವ್ಯ, ಮೈಸೂರು: ಸಂವಹನ ಪ್ರಕಾಶನ.
2. ಕೇಶವನ್ ಪ್ರಸಾದ್, (1997), ಮಲೆಯ ಮಾದೇಶ್ವರ, ಹಂಪಿ: ಕನ್ನಡ ವಿಶ್ವವಿದ್ಯಾಲಯ.
3. ಕುವೆಂಪು, (2013), ವಿಭೂತಿಪೂಜೆ, ಮೈಸೂರು: ಉದಯರವಿ ಪ್ರಕಾಶನ.